**ಸಿವಿಲ್ ಜಡ್ಜ್ ಹಾಗೂ ಹೆ.ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**ಸಿ.ಸಿ ಸಂಖ್ಯೆ ::1733/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಬೆನಕಪ್ಪ | **PW**-5 |
| **ತಂದೆಯ ಹೆಸರು** | : | ಈಶ್ವರಪ್ಪ | **CW**-2 |
| **ವಯಸ್ಸು** | : | 50 ವರ್ಷ | |
| **ಉದ್ಯೋಗ** | : | ವ್ಯವಸಾಯ | |
| **ವಾಸಸ್ಥಳ** | : | ಬೀರೂರು. | |

**ದಿನಾಂಕಃ22-01-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

ಸಾಕ್ಷಿಗೆ ನಿಪಿ2 ಮಹಜರ್ ಅನ್ನು ತೋರಿಸಲಾಗಿ ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ ಸಾಕ್ಷಿಯ ಸಹಿಯನ್ನು ನಿಪಿ2 ಬಿ ಎಂದು ಗುರುತಿಸಲಾಯಿತು. ದಿನಾಂಕ 24.09.2021 ರಂದು ಗೌರಪುರ ಹಾಗೂ ಕಾಟೀನಗೆರೆ ಗೇಟ್ ಮಧ್ಯ KA66M2388 ಮಾರುತಿ ಡಿಸೈರ್ ಕಾರ್ ಹಾಗೂ KA18X2626 ವಾಹನಗಳ ನಡುವೆ ಅಪಘಾತವಾಗಿದ್ದು ನಾನು ಸದರಿ ಸ್ಥಳಕ್ಕೆ ಅಪಘಾತವಾದ ನಂತರದಲ್ಲಿ ಹೋಗಿರುತ್ತೇನೆ. ನಾನು ಸ್ಥಳದಲ್ಲಿ ಇದ್ದ ಕಾರಣ ಪೊಲೀಸರು ನನಗೆ ಮಹಜರ್ ಮಾಡಬೇಕಾಗಿ ತಿಳಿಸಿದ್ದು ಅದಕ್ಕೆ ಪಂಚರಾಗಿ ಸಹಕರಿಸುವಂತೆ ಕೋರಿದ ಮೇರೆಗೆ ನಾನು ಹಾಗೂ ಚಾಸಾ 3 ರವರು ಸದರಿ ಮಹಜರ್ ಗೆ ಪಂಚರಾಗಲು ಒಪ್ಪಿರುತ್ತೇವೆ. ಪೊಲೀಸರು ಆ ದಿನ ಸಂಜೆ 04.00 ರಿಂದ 04.45 ಮಧ್ಯದಲ್ಲಿ ಚಾಸಾ 1 ರವರು ತೋರಿಸಿಕೊಟ್ಟಂತೆ ಸ್ಥಳ ಪಂಚನಾಮೆಯನ್ನು ನಿಪಿ2 ರಂತೆ ತಯಾರಿಸಿರುತ್ತಾರೆ. ನಿಪಿ2 ಮಹಜರ್ ನಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡು ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ನಿಪಿ2 ಮಾಡುವ ಸಮಯದಲ್ಲಿ ಪೊಲೀಸರು ಒಂದು ಫೋಟೋವನ್ನು ಸಹ ತೆಗೆದಿರುತ್ತಾರೆ. ಸಾಕ್ಷಿಯ ನಿಪಿ3 ಫೋಟೋವನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಅದೇ ದಿನ ಪೊಲೀಸರು ಅಪಘಾತಕ್ಕೀಡಾದ ವಾಹನಗಳನ್ನು ಅಮಾನತ್ತುಪಡಿಸಿಕೊಳ್ಳಬೇಕೆಂದು ನನಗೆ ತಿಳಿಸಿ ಸದರಿ ಮಹಜರ್ ಗೂ ಸಹ ಪಂಚರಾಗಿ

ಸಹಕರಿಸುವಂತೆ ಕೋರಿದ ಮೇರೆಗೆ ನಾನು ಮತ್ತು ಚಾಸಾ 3 ರವರು ಒಪ್ಪಿ ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಪೊಲೀಸರು ನಮ್ಮ ಸಮಕ್ಷಮ ಸಂಜೆ 05.15 ರಿಂದ 05.45 ರವರೆಗೆ ಒಂದು ಮಹಜರ್ ಕ್ರಮವನ್ನು ಜರುಗಿಸಿ ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಮೇಲೆ ಹೇಳಿದ KA66M2388 ಮಾರುತಿ ಡಿಸೈರ್ ಕಾರ್ ಹಾಗೂ KA18X2626 ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡು ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ಮಹಜರ್ ನಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ12 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ12 ಎ ಎಂದು ಗುರುತಿಸಲಾಯಿತು. ಪೊಲೀಸರು ಸದರಿ ಸಮಯದಲ್ಲಿ ಒಟ್ಟು 6 ಪೋಟೋಗಳನ್ನು ತೆಗೆದಿರುತ್ತಾರೆ. ನಿಪಿ6 ರಿಂದ 9 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ ಮತ್ತು ಇನ್ನೆರಡು ಪೋಟೋಗಳನ್ನು ಈಗ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ13 ಮತ್ತು 14 ಎಂದು ಗುರುತಿಸಲಾಯಿತು.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ. TDK ವಕೀಲರಿಂದ ::**

ಮೃತ ರಾಜಪ್ಪ ರವರು ಮತ್ತು ನಾನು ಒಂದೇ ಜಾತಿಯವರು ಆಗಿರುತ್ತೇವೆ ಎಂದರೆ ಸರಿ. ನಮ್ಮ ಮನೆಗೂ ಹಾಗೂ ಅಪಘಾತದ ಸ್ಥಳಕ್ಕೂ ಸುಮಾರು 3 ಕಿಮೀ ದೂರ ಇರುತ್ತದೆ. ಅಪಘಾತ ಸ್ಥಳದಲ್ಲಿ ನನ್ನನ್ನು ಹೊರತುಪಡಿಸಿ ಇನ್ನು ಸುಮಾರು ಜನ ಸೇರಿದ್ದರು ಎಂದರೆ ಸರಿ. ಅಪಘಾತ ಸ್ಥಳದ 4 ದಿಕ್ಕಿನಲ್ಲಿ ಹೊಲಗಳು ಇದ್ದು ಯಾರಿಗೆ ಸೇರಿರುತ್ತವೆ ಎಂದು ನನಗೆ ಈಗ ನೆನಪಿಲ್ಲ. ನಿಪಿ2 ಮಹಜರ್ ಅನ್ನು ಚಂದ್ರಶೇಖರ್ ಎನ್ನುವ ಪೊಲೀಸರು ಬರೆದಿರುತ್ತಾರೆ. ನಾನು ನಿಪಿ2 ಮತ್ತು 4 ಮಹಜರ್ ಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಪಿ2 ಕ್ಕೆ ನಾನು ಅಪಘಾತ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ನಿಪಿ2 ಮತ್ತು 4 ಮಹಜರ್ ಗಳನ್ನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೃತ ರಾಜಪ್ಪ ರವರ ಕುಟುಂಬಕ್ಕೆ ಸಹಾಯ ಮಾಡಲು ಅವರ ಚಿತಾವಣೆ ಮೇರೆಗೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರ್ ಜರುಗಿಸಿರುವುದಿಲ್ಲ ಹಾಗೂ ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-

ಸಿ.ಜೆ. ಮತ್ತು ಹೆ. ಜೆ.ಎಮ್.ಎಫ್.ಸಿ.,

ತರೀಕೆರೆ

ಸಾಕ್ಷಿಯ ಸಹಿ::